**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು**

**<u>ಸಿ ಸಿ ನಂ. 3807/2021</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಅಯ್ಯನಗೌಡ | ಚಾ ಸಾ -1 |
| ತಂದೆಯ ಹೆಸರು | - | ಸೀತಾರಾಮ್ | ಪ್ರಾ ಸಾ -1 |
| ವಯಸ್ಸು | - | 38 ವರ್ಷ | |
| ಉದ್ಯೋಗ | - | ಪಿಎಸ್ಐ | |
| ವಾಸ ಸ್ಥಳ | - | ಮದ್ದೂರು | |

ದಿನಾಂಕಃ 31.07.2023 ರಂದು ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : ಅಭಿಯೋಜನೆಯ ಪರಃ ಎ ಪಿ ಪಿ ಯವರಿಂದ:</u>**

ನಾನು 2016 ರಿಂದ 2019 ರವರೆಗೆ ಕೆ ಎಂ ದೊಡ್ಡಿ ಪೋಲಿಸ್ ಠಾಣೆಯಲ್ಲಿ ಪಿಎಸ್ಐಯಾಗಿ ಕೆಲಸ ನಿರ್ವಹಿಸಿರುತ್ತೆನೆ.

ದಿ. 02.04.2019 ರಂದು ರಾತ್ರಿ 8.15 ಗಂಟೆ ಸಮಯದಲ್ಲಿ ನಾನು, ಚಾಸಾ-4 ಮತ್ತು 5 ರವರೊಂದಿಗೆ ಕ್ಯಾತಘಟ್ಟದಲ್ಲಿ ಗಸ್ತು ಮಾಡುತ್ತಿದ್ದಾಗ, ಕಾರ್ಕಳ್ಳಿಯ ರಮೇಶ ಬಿನ್ ಸುಬ್ಬೇಗೌಡ ತಮ್ಮ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಇಟ್ಟುಕೊಂಡು ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದ ಮೇರೆಗೆ ನಾನು, ಚಾಸಾ-4 ಮತ್ತು 5 ರವರಿಗೆ ವಿಚಾರ ತಿಳಿಸಿ ಅವರೊಂದಿಗೆ ಕಾರ್ಕಳ್ಳಿಗೆ ಹೋಗಿ ಸರ್ಕಲ್ ಬಳಿ ಇದ್ದ ಪಂಚರಾದ ಚಾಸಾ-2 ಮತ್ತು 3 ರವರಿಗೆ ವಿಚಾರ ತಿಳಿಸಿ ಪಂಚರಾಗಿ ಬರಮಾಡಿಕೊಂಡು ಮಾಹಿತಿ ಇದ್ದ ಸ್ದಳಕ್ಕೆ ರಾತ್ರಿ 8.30 ಗಂಟೆಗೆ ಹೋಗಿ ನೋಡಲಾಗಿ ಅಂಗಡಿಯಲ್ಲಿ ಒಬ್ಬ ವ್ಯಕ್ತಿ ಇದ್ದನು. ಆತನನ್ನು ವಿಚಾರಿಸಿದಾಗ ತನ್ನ ಹೆಸರು ರಮೇಶ ಬಿನ್ ಸುಬ್ಬೇಗೌಡ ಎಂದು ತಿಳಿಸಿರುತ್ತಾನೆ. ಮಾರಾಟ ಮಾಡಲು ಪರವಾನಗಿ ಇಲ್ಲ ಎಂದು ತಿಳಿಸಿರುತ್ತಾನೆ.

ಸದರಿ ಅಂಗಡಿಯನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ ಒಂದು ರಟ್ಟಿನ ಬಾಕ್ಸ್ ನಲ್ಲಿ 90 ಎಂಎಲ್ ನ ಹೆ ವರ್ಡ್ಸ್ ಚಿಯರ್ಸ್ ವಿಸ್ಕಿಯ 33 ಪೌಚ್ ಗಳು ಇದ್ದು ಒಂದು ಪೌಚ್ ಮದ್ಯವನ್ನು ರಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ ಪ್ಯಾಕ್ ಮಾಡಿ ಸಿಲ್ ಮಾಡಿರುತ್ತೆವೆ. ಪಂಚರ ಸಮಕ್ಷಮ ಮಹಜರ್ ನ್ನು ರಾತ್ರಿ 8.30 ರಿಂದ 9.45 ಗಂಟೆಯರವರೆಗೆ ಮಾಡಿರುತ್ತೇವೆ.

ನಂತರ ಠಾಣೆಗೆ ಮಾಲಿನೊಂದಿಗೆ ಮತ್ತು ಆರೋಪಿಯೊಂದಿಗೆ ವಾಪಸ್ಸು ಬಂದು ಚಾಸಾ-9 ರವರಿಗೆ ವರದಿ ನೀಡಿ ಮುಂದಿನ ಕ್ರಮಕ್ಕಾಗಿ ಹಸ್ತಾಂತರಿಸಿರುತ್ತೇನೆ.

ಮಹಜರ್ ನ್ನು ಸಾಕ್ಷಿ ಗುರುತಿಸಿದ ಮೇರೆಗೆ ಮಹಜರ್ ನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸ್ವವರದಿಯನ್ನು ಸಾಕ್ಷಿ ಗುರುತಿಸಿದ ಮೇರೆಗೆ ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಅಮಾನತ್ತು ಪಡಿಸಿಕೊಂಡ ಮತ್ತು ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ 1 ಪೌಚ್ ನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ಎಂಓ-1 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಕೆ ವಿ ವಿ ವಕೀಲರಿಂದಃ</u>**

ಸದರಿ ದಿನ ಠಾಣೆಯನ್ನು ಎಷ್ಟು ಸಮಯಕ್ಕೆ ಬಿಟ್ಟಿರುತ್ತೇನೆ ಎಂದು ನಿಖರವಾಗಿ ನೆನಪಿಲ್ಲ. ಠಾಣೆಯಿಂದ ಹೊರ ಹೋಗುವಾಗ ಈ ಬಗ್ಗೆ ನಮೂದು ಮಾಡಬೇಕು ಎಂದರೆ ಸರಿ. ಮಾಹಿತಿ ಬಾತ್ಮಿದಾರರಿಂದ ಮೌಖಿಕವಾಗಿ ತಿಳಿಸಿರುತ್ತಾರೆ. ಸದರಿ ಮಾಹಿತಿಯನ್ನು ಠಾಣಾಧಿಕಾರಿಗೆ ತಿಳಿಸಲು ತೊಂದರೆ ಇರಲಿಲ್ಲ. ನ್ಯಾಯಾಲಯದ ಶೋಧನಾ ವಾರೆಂಟ್ ಪಡೆದುಕೊಂಡಿರಲಿಲ್ಲ. ನಾವೇ ಸ್ಥಳದಲ್ಲಿ ಶೋಧನಾ ವಾರೆಂಟ್ ತಯಾರಿಸಿರುವುದಿಲ್ಲ.

ಘಟನಾ ಸ್ಥಳ ಠಾಣೆಯಿಂದ ಸುಮಾರು 8 ಕಿ ಮೀ ಇರುತ್ತದೆ. ನಾನು, ಚಾಸಾ-4 ಮತ್ತು 5 ರವರು ಘಟನಾ ಸ್ಥಳಕ್ಕೆ ಪಂಚರೊಂದಿಗೆ ಹೋಗಿರುತ್ತೇವೆ. ಪಂಚರು ಕಾರ್ಕಳ್ಳಿ ಸರ್ಕಲ್ ಬಳಿ ಇದ್ದರು. ಆರೋಪಿಯ ಅಂಗಡಿಯ ವಿಳಾಸವನ್ನು ಬಾತ್ಮಿದಾರರೇ ತಿಳಿಸಿರುತ್ತಾರೆ. ಅಂಗಡಿ ವಿಳಾಸ ಅವರು ಹೇಳುವ ಮುಂಚೆ ನನಗೆ ತಿಳಿದಿರಲಿಲ್ಲ. ಸದರಿ ಅಂಗಡಿ ಪೆಟ್ಟಿ ಅಂಗಡಿಯಾಗಿತ್ತು. ಅದರ ವಿಸ್ತೀರ್ಣ ಮತ್ತು ಬಾಗಿಲಿನ ದಿಕ್ಕನ್ನು ಈಗ ನಿಖರವಾಗಿ ಹೇಳಲು ಆಗುವುದಿಲ್ಲ. ಮಹಜರಿನಲ್ಲಿ ನಮೂದು ಮಾಡಿರುವುದಿಲ್ಲ. ಆರೋಪಿ ನಮ್ಮನ್ನು ನೋಡಿ ಓಡಿ ಹೋಗುವ ಪ್ರಯತ್ನ ಮಾಡಿರುವುದಿಲ್ಲ. ಅಂಗಡಿಯ ಬಳಿ ಗಿರಾಕಿಗಳು ಇದ್ದರು. ಗಿರಾಕಿಗಳ ಸಹಿಯನ್ನು ಮಹಜರಿಗೆ ಪಡೆದಿಲ್ಲ, ಏಕೆಂದರೆ ಅವರು ನಿರಾಕರಿಸಿರುತ್ತಾರೆ. ಮಹಜರ್ ಕಾಲದಲ್ಲಿ ಫೋಟೋ ತೆಗೆದಿಲ್ಲ.

ಎಲ್ಲಾ ಮದ್ಯವನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಪ್ಯಾಕ್ ಮಾಡಲು ತೊಂದರೆ ಇರಲಿಲ್ಲ. ಮು ಮಾ.1 ರಂತಹ ಪ್ಯಾಕೆಟ್ ಗಳು ಮದ್ಯದ ಅಂಗಡಿಯಲ್ಲಿ ಸಿಗುತ್ತದೆ ಎಂದರೆ ಸರಿ.

ಮಹಜರನ್ನು ನನ್ನ ಸಿಬ್ಬಂದಿ ಚಾಸಾ-4 ಬರೆದಿರುತ್ತಾರೆ, ಅದರಲ್ಲಿ ಅವರು ಬಿಕ್ಕಲಂ ಸಹಿ ಮಾಡಿರುವುದಿಲ್ಲ.

ಚಾಸಾ-2 ಮತ್ತು 3 ರವರು ನಮ್ಮ ಠಾಣೆಯ ಸ್ಟಾಕ್ ಸಾಕ್ಷಿದಾರರು ಎಂದರೆ ಸರಿಯಲ್ಲ. ಮದ್ಯವನ್ನು ಆರೋಪಿ ಎಲ್ಲಿಂದ ತಂದಿರುತ್ತಾರೆ ಎಂದು ನಾನು ವಿಚಾರ ಮಾಡಿರುವುದಿಲ್ಲ, ತನಿಖಾಧಿಕಾರಿಗಳು ಮಾಡಿರಬಹುದು. ಏಕೆಂದರೆ ಆರೋಪಿ ಗಾಬರಿಯಲ್ಲಿದ್ದರು. ನಾನು ಸದರಿ ದಿನ ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ, ಯಾವುದೇ ದಾಳಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ, ನಿಪಿ-1 ನ್ನು ಠಾಣೆಯಲ್ಲಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅರೋಪಿ ಯಾವುದೇ ಅಂಗಡಿ ನಡೆಸುತ್ತಿಲ್ಲ, ಆರೋಪಿ ವ್ಯವಸಾಯ ಮಾಡುವವರು ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿರುವುದಿಲ್ಲ, ಆದರೂ ಸಹ ಠಾಣಾ ಅಂಕಿ ಅಂಶಗಳಿಗಾಗಿ ನಾನು ಸುಳ್ಳು ವರದಿ ನೀಡಿ, ಅದಕ್ಕೆ ಪೂರಕವಾಗಿ ದಾಖಲೆ ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ</u>**

(ತೆ:ನ್ಯಾ:ದಲ್ಲಿ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

**ಪಿಸಿಜೆ ಮತ್ತು ಜೆಎಂಎಫ್‌ಸಿ.,**
**ಮದ್ದೂರು.**